**S.C10004/2024**
**P.W-5**

**ಈ ದಿನ ದಿನಾಂಕಃ 25.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರರಿಂದಃ**

1. 2023 ರಲ್ಲಿ ನನ್ನ ಬಳಿ ಮೊಬೈಲ್ ಇತ್ತು, ಅದರ ನಂ. **7598056441.** ಮದುವೆ ಯಾದ ಮೇಲೆ ನನ್ನ ಮಗಳು ನನ್ನ ಹತ್ತಿರ ಫೋನನಲ್ಲಿ ಮಾತನಾಡುತ್ತಿದ್ದಳು, 11.04.2023 ರಂದು ಮೃತೆ ನನಗೆ ಪೂರ್ತಿ ದಿವಸ ಫೋನ ಮಾಡಿರಲಿಲ್ಲ, ಆ ದಿನ ಮೃತೆ ನನ್ನ ಗಂಡನಿಗೆ ಪೋನ ಮಾಡಿಲ್ಲ, ಈ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಪೋನನ್ನು ಪೋಲಿಸರು ವಶಪಡಿಸಿಕೊಂಡಿಲ್ಲ, ನನ್ನ ಸಾಕ್ಷ್ಯ ಪ್ರಮಾಣಪತ್ರ ಕಂಡಿಕೆ 4 ರಲ್ಲಿ ತಿಳಿಸಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 11.04.2023 ರಂದು 9-00 ಗಂಟೆಗೆ ಶ್ಯಾಮರಿದಾಸ ತಂದೆ ಪೋನ ಮಾಡಿದ ವಿಷಯದ ಬಗ್ಗೆ ನನ್ನ ಬಳಿ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ, ರಾತ್ರಿ 12-30 ಗಂಟೆಗೆ ಮಗಳು ತಂದೆಗೆ ಪೋನ ಮಾಡಿದ ಬಗ್ಗೆ ನನ್ನ ಬಳಿ ಯಾವ ಆಧಾರ ಇದೆ ಎಂದರೆ ಗೊತ್ತಿಲ್ಲ. ಕನ್ಯಾಕುಮಾರಿ ನಲ್ಲಿ ಪೋಲಿಸರಿಗೆ ಆರೋಪಿ ನನ್ನ ಮಗಳನ್ನು ಕೊಲೆ ಮಾಡುತ್ತಾನೆಂದು ಹೇಳಲಾದ ಪೋನ ಮಾಹಿತಿ ನಾನು ಕನ್ಯಾಕುಮಾರಿ ಪೋಲಿಸರಿಗೆ ತಿಳಿಸಿರಲಿಲ್ಲ. ಈ ರೀತಿಯ ಯಾವುದೇ ಪೋನ ಮಾಹಿತಿ ಬಂದಿರಲಿಲ್ಲ, ಹೀಗಾಗಿ ನಾನು ಕನ್ಯಾಕುಮಾರಿ ಪೋಲಿಸರಿಗೆ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ನನ್ನ ಮೊದಲನೇ ಅಳಿಯನಿಗೆ ಪೋನ ಬಂದ ವಿಷಯ ನಾನು ಹೇಳಿಲ್ಲ ಎಂದರೆ ಸರಿ. ನಾನು ಹಾಗೂ ಒಟ್ಟು 6 ಮಂದಿ ಕನ್ಯಾಕುಮಾರಿಯಿಂದ ಹೊರಟು ಬಂದೆವು, ನನ್ನ ಮೊದಲನೆಯ ಅಳಿಯ ತಿರುವನ್ಪೆಲಿ ನಲ್ಲಿ ಇದ್ದರಿಂದ ಆತ ನಮ್ಮೊಂದಿಗೆ ಬಂದಿರಲಿಲ್ಲ, ನಾವು ರಾತ್ರಿ 11 ಗಂಟೆಗೆ ಕನ್ಯಾಕುಮಾರಿ ಬಿಟ್ಟಿದ್ದೆವು, ಮೊದಲನೆಯ ಅಳಿಯನನ್ನು ನಾವು ತಿರುವನ್‌ವೆಲಿನಲ್ಲಿ ಬೆಳಗಿನ ಜಾವ 5-00 ಗಂಟೆಗೆ ನೋಡಿದೆವು. ಬೆಂಗಳೂರಿಗೆ ನಾವು ರಾತ್ರಿ 12-00 ಗಂಟೆಗೆ ಬಂದೆವು, ಅಲ್ಲಿಯತನಕ

ಬೇರೆಯವರು ವಿಷಯ ಹೇಳಿದ್ದರಿಂದ ತಿಳಿಯಿತು, ನನಗೆ ಖುದ್ದು ಮಾಹಿತಿ ಇರಲಿಲ್ಲ ಎಂದರೆ ಸರಿ. ಆರೋಪಿ ಮನೆಯಿಂದ ಹೊರಗೆ ಹೋಗಿದ್ದಾಗ ನನ್ನ ಮಗಳಿಗೆ ಯಾರೋ ಅಪರಿಚಿತರು ಬಂದು ಹಲ್ಲೆ ಮಾಡಿರುತ್ತಾರೆ ಎಂದು ನನ್ನ ಗಂಡ ಹಾಗೂ ಮೊದಲನೆಯ ಅಳಿಯ ಮತ್ತು ಕಾರಿನಲ್ಲಿ ಬಂದ 5 ಜನರು ಹೇಳಿದ್ದರು ಎಂದರೆ ಸರಿಯಲ್ಲ.

3. ಕನ್ಯಾಕುಮಾರಿಯಿಂದ ಬಂದ ನಂತರ ನಾವು ನೇರವಾಗಿ ಪೋಲಿಸ ಠಾಣೆಗೆ ಹೋದೆವು. ಅಲ್ಲಿ ಎಷ್ಟು ಹೊತ್ತು ಠಾಣೆಯಲ್ಲಿ ಇದ್ದೆವು ಎಂದರೆ ಬೆಳಗಿನ ಜಾವದವರೆಗೂ ಇದ್ದೆವು, ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದರು, ನಾನು ಘಟನೆ ಬಗ್ಗೆ ಯಾರ ಹತ್ತಿರವಾದರೂ ಕೇಳಿ ತಿಳಿದುಕೊಂಡಿದ್ದೆ ಎಂದರೆ ಪೋಲಿಸರ ಹತ್ತಿರ ವಿಚಾರ ಮಾಡಿಕೊಂಡಿದ್ದೆ, ಪೋಲಿಸರು ಹೇಳಿರುವ ವಿಷಯವನ್ನು ನಾನು ನನ್ನ ಅಳಿಯ ಹಾಗೂ ಇತರರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ, ಪೋಲಿಸರು ಹೇಳಿದ ವಿಷಯ ಸುಳ್ಳು ಅಥವಾ ನಿಜವೋ ಎಂದು ನಾನು ಯಾರ ಹತ್ತಿರವೂ ಕೇಳಿ ತಿಳಿದುಕೊಳ್ಳಲಿಲ್ಲ. ನಿಪಿ 12 ದೂರನ್ನು ಯಾರು ಟೈಪ್ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ, ಮುಂದುವರೆದು ಠಾಣೆಯಲ್ಲಿ ಪೋಲಿಸರು ಟೈಪ ಮಾಡಿದ್ದರು. ಆ ಸಮಯದಲ್ಲಿ ನನ್ನ ದೊಡ್ಡ ಅಳಿಯ ಮತ್ತು ಕನ್ನಡ ಗೊತ್ತಿರುವ ಒಬ್ಬ ವ್ಯಕ್ತಿ ಇದ್ದರು. ನಾನು ಹೇಳಿದ ಹಾಗೆ ಕನ್ನಡ ತಿಳಿದ ವ್ಯಕ್ತಿ ಟೈಪ್ ಮಾಡಿದರು. ನನ್ನ ಅಳಿಯ ಪೋಲಿಸರಿಗೆ ಹೇಳಿದ್ದು ಅವರು ಹೇಳಿದ ಹಾಗೆ ನಾನು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ದೂರಿನ ವಿಚಾರ ನನಗೆ ಬೆಂಗಳೂರಿಗೆ ಬರುವ ಮುಂಚೆಯೇ ಅಥವಾ ನಂತರ ಗೊತ್ತಾಗಿದೆಯೋ ಎಂದರೆ ಬೆಂಗಳೂರಿಗೆ ಬರುವ ಮುಂಚೆಯೇ ಗೊತ್ತಾಗಿತ್ತು. ನನ್ನ ಅಳಿಯ ಹೊರಗೆ ಹೋಗಿದ್ದಾಗ ಯಾರೋ ಅಪರಿಚಿತರು ಮನೆಗೆ ಬಂದು ನನ್ನ ಮಗಳಿಗೆ ಹಲ್ಲೆ ಮಾಡಿರುತ್ತಾರೆ ಎಂಬ ವಿಷಯ ನನಗೆ ಬೆಂಗಳೂರಿಗೆ ಬರುವ ಮುಂಚೆಯೇ ತಿಳಿಯಿತು ಎಂದರೆ ಸರಿಯಲ್ಲ. ಇದೇ ವಿಷಯವನ್ನು ಪೋಲಿಸರು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ದೂರು ಕೊಡಲು ಯಾರು ಯಾರು ತೀರ್ಮಾನ ಮಾಡಿ ಕೊಟ್ಟಿರುತ್ತೀರಿ ಎಂದರೆ ನಾನೇ ಕೊಟ್ಟಿರುತ್ತೇನೆ. ನನ್ನ ಅಳಿಯ ಹೇಳಿದ ಹಾಗೆ ನಾನು ದೂರು ಕೊಟ್ಟಿದ್ದೇನೆಂದರೆ ನಾನೇ ಕೊಟ್ಟಿದ್ದೇನೆ. ಆರೋಪಿ

ನಿರಪರಾಧಿ ಅವರು ಘಟನೆ ಸಮಯದಲ್ಲಿ ಹೊರಗೆ ಇದ್ದರು ಅವರ ಮೇಲೆ ದೂರು ಕೊಡುವುದು ಬೇಡ ಎಂದು ನನಗೆ ಹೇಳಿದ್ದನು ಎಂದರೆ ಸರಿಯಲ್ಲ.

4. ಬೆಂಗಳೂರಿನಲ್ಲಿ, ದೊಡ್ಡಬಳ್ಳಾಪುರದಲ್ಲಿ ನನ್ನ ಸಂಬಂಧಿಕರು ಯಾರು ಇಲ್ಲ. ನನ್ನ ಮುಖ್ಯ ವಿಚಾರಣೆ **ಕಂಡಿಕೆ 5, 6 ಮತ್ತು 7 ರಲ್ಲಿ** ಹೇಳಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡ, ನನ್ನ ಮೊದಲನೆ ಅಳಿಯ ಬಿಟ್ಟು 6 ಜನ ಸಂಬಂಧಿಕರು ಬಂದಿದ್ದರು. ಕಂಡಿಕೆ 7 ರಲ್ಲಿ ಹೇಳಿರುವ ವಿಷಯ ನನಗೆ ನನ್ನ ಮೊದಲನೆ ಅಳಿಯನಿಂದ ತಿಳಿದು ಬಂದಿತ್ತು. ಘಟನಾ ಸ್ಥಳಕ್ಕೆ ಹೋದಾಗ ನನ್ನ ಮೊದಲನೆ ಅಳಿಯ ಅಲ್ಲಿ ಬಂದಿದ್ದನು. ಆರೋಪಿ ಮನೆಯಿಂದ ಹೊರಗೆ ಇದ್ದಾಗ ಘಟನೆ ಸಂಭವಿಸಿರುತ್ತದೆ ಎಂದು ನನ್ನ ಮೊದಲನೆ ಅಳಿಯ ಆ ಸಮಯದಲ್ಲಿ ಹೇಳಿದ್ದನು ಎಂದರೆ ಸರಿಯಲ್ಲ. ಸದರಿ ಕೊಲೆಗೂ ಆರೋಪಿಗೂ ಸಂಬಂಧ ಇಲ್ಲ, ಆತ ಮನೆಯಿಂದ ಹೊರಗೆ ಇದ್ದಾಗ ಯಾರೋ ಬಂದು ಕೊಲೆ ಮಾಡಿದ್ದು, ಆರೋಪಿ ಮೇಲಿನ ಕೋಪಕ್ಕೆ ಆತನ ವಿರುದ್ದ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಪೋಲಿಸರು ಹೇಳಿ ಕೊಟ್ಟ ಹಾಗೆ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ